ಲೇಖನ 03

# ಹಾವಿನ ಹೆಜ್ಜೆ

ಹಾವುಗಳು ಸರೀಸೃಪಗಳು, ಹುರುಪೆಗಳಿಂದ ಕೂಡಿದ ಚರ್ಮವನ್ನು ಹೊಂದಿರುವ ಇವು ತೆವಳುತ್ತಾ ನಡೆಯುತ್ತವೆ. ಇವು ಶೀತರಕ್ತ ಪ್ರಾಣಿಗಳು, ಇವುಗಳು ಮಾಂಸಾಹಾರಿ ಜೀವಿಗಳು. ಹಾವುಗಳು ಡೈನೋಸಾರಸ್ಗಳ ಕಾಲದಿಂದಲೂ ಭೂಮಿಯ ಮೇಲೆ ಇವೆ. ಪ್ರಪಂಚದಲ್ಲಿ 4000ಕ್ಕೂ ಹೆಚ್ಚು ಪ್ರಭೇದದ ಹಾವುಗಳಿದ್ದು, ಅದರಲ್ಲಿ ಕೇವಲ 600 ಪ್ರಭೇದದ ಹಾವುಗಳು ವಿಷಕಾರಿಯಾಗಿದ್ದು, 200 ಪ್ರಭೇದದ ಹಾವುಗಳ ವಿಷವನ್ನು ಔಷಧಿ ತಯಾರಿಸಲು ಬಳಸುತ್ತಾರೆ.

ಭಾರತದಲ್ಲಿ 300ಕ್ಕೂ ಹೆಚ್ಚು ಪ್ರಭೇದದ ಹಾವುಗಳಿವೆ. ಕಾಳಿಂಗಸರ್ಪ, ನಾಗರಹಾವು, ಮಂಡಲದ ಹಾವು, ಕಟ್ಟುಹಾವು, ರಕ್ತಮಂಡಲ ಮುಂತಾದ ಹಾವುಗಳು ವಿಷಕಾರಿಯಾಗಿವೆ. ನಾಗರಹಾವು ಸಾಧಾರಣವಾಗಿ ಭಾರತದ್ಯಾಂತ ಕಾಣ ಸಿಗುತ್ತದೆ. ಇವುಗಳು ಎಲಾಫಿಡೆ ಕುಟುಂಬಕ್ಕೆ ಸೇರಿದ್ದು, ಇವುಗಳಿಗೆ 'ನಾಜ' ಎಂಬ ವೈಜ್ಞಾನಿಕ ಹೆಸರಿದೆ. ಸಾಮಾನ್ಯವಾಗಿ ನಾಗರಹಾವಿನ ಹೆಡೆಯ ಮೇಲೆ ಮೂಡಿರುವ 'ವಿ' ಆಕಾರವನ್ನು ಹಾವಿನ ಗುರುತಿಸುವಿಕೆಯಲ್ಲಿ 'ಕನ್ನಡಕ' ಎಂದು ಕರೆಯುತ್ತಾರೆ. ಭಾರತದ ಈಶಾನ್ಯ ರಾಜ್ಯಗಳಲ್ಲಿ ಕಂಡುಬರುವ ನಾಗರಹಾವಿನ ಹೆಡೆಯ ಮೇಲೆ ಸೊನ್ನೆಯಾಕಾರದಲ್ಲಿರುತ್ತದೆ. ಇದನ್ನು ಏಕ ಕನ್ನಡಕದ ಹಾವು 'ಮೋನೋಕ್ಲೆಡ್ ಕೋಬ್ರ' (ನಾಜ ಕೌತಿಯಾ) ಎಂದು ಕರೆಯುತ್ತಾರೆ. ಅಂಡಮಾನ್ ದ್ವೀಪಗಳಲ್ಲಿ ಕಂಡುಬರುವ ಅಂಡಮಾನ್ ಕೋಬ್ರ (ನಾಜ ಸ್ಯಾಜಿಟ್ಟಿಫೆರ) ಮತ್ತು ಆಗ್ನೇಯ ಭಾರತದಲ್ಲಿ ಕಂಡುಬರುವ ಸೆಂಟ್ರಲ್ ಏಷಿಯನ್ ಕೋಬ್ರ (ನಾಜ ಅಕ್ಸಿಯಾನ) ಗಳನ್ನೂ ಕೂಡ ನಾಗರ ಹಾವುಗಳೆಂದು ಕರೆಯುತ್ತಾರೆ. ಜೊತೆಗೆ ಮಿಡಿನಾಗರ, ಗೋಧಿನಾಗರ, ಕನ್ನಡಕವಿಲ್ಲದ ನಾಗರ, ಶ್ವೇತನಾಗರ ಮುಂತಾದವುಗಳಿವೆ.



ಚಿತ್ರ ಕೃಪೆ: ಅಶೋಕ್ N

ನಾಗರಹಾವು ರೇಗಿದಾಗ ತನ್ನ ದೇಹವನ್ನು ಮೇಲಕ್ಕೆತ್ತಿ, ಹೆಡೆಯನ್ನು ಅಗಲಿಸಿ ಬುಸುಗುಡುತ್ತ ತನ್ನ ಎದುರಾಳಿಯನ್ನು ಕಚ್ಚುತ್ತದೆ. ಕಡಿತಕ್ಕೊಳಗಾದ ಜಾಗ ಕೆಂಪಗಾಗುತ್ತದೆ, ಉರಿ ಉಂಟಾಗುತ್ತದೆ. ಕಡಿಸಿಕೊಂಡ ವ್ಯಕ್ತಿಗೆ ನಿದ್ರೆ ಬಂದಂತಾಗುತ್ತದೆ. ೩೦-೫೦ ನಿಮಿಷಗಳಲ್ಲಿ ಬಾಯಿಂದ ಜೊಲ್ಲು ಯಥೇಚ್ಛವಾಗಿ ಉತ್ಪತ್ತಿಯಾಗುವುದು. ನಾಲಗೆ ಉಬ್ಬಿಕೊಳ್ಳುವುದು. ನಿಧಾನವಾಗಿ ಉಸಿರಾಟವೂ, ಹೃದಯ ಬಡಿತವೂ ನಿಂತು ಹೋಗುವವು. ವ್ಯಕ್ತಿ ಹಾವಿನ ಕಡಿತಕ್ಕೆ ಒಳಗಾದ ತಕ್ಷಣ ಪ್ರತಿವಿಷವನ್ನು ಕೊಡುವುದರಿಂದ ಸಾವನ್ನು ತಪ್ಪಿಸಬಹುದು. ಹಾವಿನ ಕಡಿತಕ್ಕೆ ಹಾವಿನ ವಿಷವೇ ಮದ್ದು ಎಂಬುದು ಸತ್ಯ. ಹಾವುಗಳನ್ನು ಕಂಡಕೂಡಲೇ ವಿಷಜಂತುವೆಂದು ಕೊಲ್ಲುವುದು ಸರಿಯಲ್ಲ. ಹಾವಿನ ಕಡತಕ್ಕೆ ಹಾವಿನ ವಿಷದಿಂದ ಮಾಡುವ ಪ್ರತಿವಿಷವೆ ಔಷಧಿ.

ಹಾವುಗಳು ಅಳಿವಿನಂಚಿನಲ್ಲಿರುವ ಜೀವಿಗಳು. ನಿಸರ್ಗದ ಸರಪಳಿಯನ್ನು ಕಾಯಲು ಹಾವುಗಳ ರಕ್ಷಣೆ ಅತ್ಯಗತ್ಯ.

**ಹಾವಿನ ದ್ವೇಷ ಹನ್ನೆರಡು ವರುಷ...**

ಹಾವುಗಳು ಹಗೆಸಾದಿಸುತ್ತವೆ, ಸೇಡು ತೀರಿಸಿಕೊಳ್ಳುತ್ತವೆ ಎಂದೆಲ್ಲಾ ಸಿನಿಮಾಗಳಲ್ಲಿ ನೋಡಿರಬಹುದು, ಹಾವನ್ನು ಸಾಯಿಸುವ ಸಮಯದಲ್ಲಿ ಅದು ತಪ್ಪಿಸಿಕೊಂಡು ಹೋದರೆ, ಸಾಯಿಸಲು ಬಂದವರ ಮೇಲೆ ಸೇಡುತೀರಿಸಿಕೊಳ್ಳುತ್ತದೆ ಎಂದೆಲ್ಲಾ ಕೇಳಿದ್ದೇವೆ. ಆದರೆ ಸತ್ಯವೇನೆಂದರೆ ಹಾವಿಗೆ ಜ್ಞಾಪಕಶಕ್ತಿ ಇರುವುದಿಲ್ಲ. ಅವುಗಳಿಗೆ ಕಣ್ಣು ಸರಿಯಾಗಿ ಕಾಣುವುದಿಲ್ಲ. ಹಾವುಗಳ ಮೆದುಳಿನಲ್ಲಿ ದೊಡ್ಡ ಮೆದುಳು (ಸೆರಿಬ್ರಮ್) ಇರುವುದಿಲ್ಲ, ಇದರಿಂದ ಹಾವುಗಳು ಹೆಚ್ಚು ನೆನಪಿಟ್ಟುಕೊಳ್ಳಲು ಸಾಧ್ಯವಿಲ್ಲ. ಹಾವುಗಳು ಯಾರಮೇಲು ದ್ವೇಷ ಸಾದಿಸುವುದಿಲ್ಲ.

ಆದರೆ ಸರ್ಪಗಳನ್ನು ಉಳಿಸುವ ಸಲುವಾಗಿ ಈ ಸುಳ್ಳು ಹುಟ್ಟಿಕೊಂಡಿತ್ತು. ಹಾವುಗಳು ರೈತನ ಮಿತ್ರ. ಹಾವುಗಳು ರೈತರ ಬೆಳೆಯನ್ನು ಇಲಿಗಳಿಂದ ರಕ್ಷಿಸುತ್ತವೆ. ಒಂದು ನಾಗರಹಾವು ತನ್ನ ಜೀವಿತಾವಧಿಯಲ್ಲಿ ಸುಮಾರು 800 ಇಲಿಗಳನ್ನು ತಿನ್ನುತ್ತದೆ. ಇದರಿಂದ ಪ್ರತಿವರ್ಷ 18% ಕ್ಕೂ ಹೆಚ್ಚು ಬೆಳೆಗಳನ್ನು ಉಳಿಸುತ್ತದೆ. ಹಾವುಗಳನ್ನು ಕೊಲ್ಲುವುದರಿಂದ ಇಲಿಗಳ ಕಾಟ ಹೆಚ್ಚಾಗುತ್ತದೆ. ಆದ್ದರಿಂದ ಯಾರು ಹಾವುಗಳನ್ನು ಕೊಲ್ಲಬಾರದೆಂದು ಸೇಡಿನ ಕತೆಗಳು ಹುಟ್ಟಿಕೊಂಡವು. ಅದಕ್ಕಾಗಿಯೇ ಹಾವುಗಳನ್ನು ನಾವು ಪೂಜ್ಯನೀಯ ಸ್ಥಾನದಲ್ಲಿ ನೋಡುತ್ತೇವೆ. ಪ್ರತಿವರ್ಷವು ನಾಗರಪಂಚಮಿ ಆಚರಿಸುತ್ತೇವೆ.



ಚಿತ್ರ ಕೃಪೆ: ಅಶೋಕ್ N

**ಹಾವಿಗೆ ಹಾಲೆರೆದೇನು ಫಲ...?**

ನಾಗರಪಂಚಮಿಯ ಆಚರಣೆಯ ಹಿಂದೆ ಬಹಳಷ್ಟು ಕಥೆಗಳಿವೆ. ಶ್ರಾವಣ ಮಾಸದ ಶುಕ್ಲಪಕ್ಷದ ಪಂಚಮಿಯಂದು ದೇಶದಲ್ಲೆಲ್ಲಾಕಡೆ ನಾಗರಪಂಚಮಿಯನ್ನು ಆಚರಿಸುತ್ತಾರೆ. ಸಾಮಾನ್ಯವಾಗಿ ಹುತ್ತಕ್ಕೆ ಹಾಲೆರೆದು ಪೂಜಿಸುತ್ತಾರೆ. ಹಾವುಗಳು ಹಾಲು ಕುಡಿಯುತ್ತವೆ ಎಂಬುದು ನಮ್ಮ ದೇಶದಲ್ಲಿರುವ ದೊಡ್ಡ ಮೂಢನಂಬಿಕೆ. ವೈಜ್ಞಾನಿಕವಾಗಿ ಯೋಚಿಸುವುದಾದರೆ ಹಾಲು ಹಾವಿನ ಆಹಾರವಲ್ಲ. ಹಾಲು ಕುಡಿಯುವ ಜೀವಿಗಳನ್ನು ಸಸ್ತನಿಗಳು ಎಂದು ಕರೆಯುತ್ತಾರೆ. ಆದರೆ ಹಾವುಗಳು ಸರೀಸೃಪಗಳು, ಹಾವುಗಳು ಹಾಲು ಕುಡಿಯುವುದಿಲ್ಲ, ಒಂದುವೇಳೆ ಕುಡಿದರು ಅದು ಜೀರ್ಣವಾಗುವುದಿಲ್ಲ. ಒಂದುವೇಳೆ ಹಾವಿನ ಬಾಯಲ್ಲಿರುವ ಶ್ವಾಸನಾಳದ ದ್ವಾರ (ಗ್ಲಾಟಿಸ್) ದ ಮೂಲಕ ಹಾಲು ಹೋದರೆ ನೇರವಾಗಿ ಶ್ವಾಸಕೋಶ ಸೇರುತ್ತದೆ. ಇದರಿಂದ ಶ್ವಾಸಕೋಶದ ಉರಿಯೂತ (ನ್ಯೂಮೋನಿಯಾ) ಬಂದು ಹಾವು ಸತ್ತುಹೋಗುತ್ತದೆ.

ಹಾಲುಕುಡಿದ ಹಾವು ಬದುಕುವುದು ಕಷ್ಟ, ಆದರೆ ಕೆಲವೊಂದು ಸಿನಿಮಾಗಳಲ್ಲಿ ಹಾವುಗಳು ಹಾಲುಕುಡಿಯುವುದನ್ನು ನೀವು ನೋಡಿರಬಹುದು. ಅದು ಹೇಗೆ ಸಾಧ್ಯವೆಂದರೆ, ಹಾವಾಡಿಗರು ಹಾವನ್ನು ಹಿಡಿದು ತಿಂಗಳುಗಳ ಕಾಲ ಉಪವಾಸ ಕೆಡವುತ್ತಾರೆ. ಕೆಲವು ತಿಂಗಳ ಬಳಿಕ ಹಾವಿನ ಮುಂದೆ ಹಾಲನ್ನು ಇಡುತ್ತಾರೆ. ಬಹಳ ದಿನಗಳಿಂದ ಹಸಿದಿದ್ದ ಹಾವು ಹಾಲು ಸಿಕ್ಕ ತಕ್ಷಣ ಕುಡಿದುಬಿಡುತ್ತದೆ. ಆದರೆ ಹೆಚ್ಚು ಕಾಲ ಬದುಕುವುದಿಲ್ಲ.


ಚಿತ್ರ ಕೃಪೆ: ಅಶೋಕ್ N

ಹಾಗಾದರೆ ಹುತ್ತಕ್ಕೆ ಏಕೆ ಹಾಲೆರೆಯುತ್ತಾರೆ? ಇದಕ್ಕೆ ಬೇರೆ ಬೇರೆ ಕಾರಣಗಳಿರಬಹುದು. ಆದರೆ ಹಾವು ಶೀತರಕ್ತ ಪ್ರಾಣಿ, ಅವುಗಳ ದೇಹದಲ್ಲಿ ಸ್ವತಃ ಶಾಖ ಉತ್ಪತ್ತಿಯಾಗುವುದಿಲ್ಲ. ಆದ್ದರಿಂದ ಅವು ಬಿಸಿಲು ಕಾಯುವುದರಿಂದ ಸೂರ್ಯನ ಶಾಖವನ್ನು ಹೀರಿಕೊಳ್ಳುತ್ತವೆ. ಹೀಗಾಗಿ ಹಾವುಗಳು ಬೇಸಿಗೆಯಲ್ಲಿ ಹೆಚ್ಚಾಗಿ ಕಾಣಸಿಗುತ್ತವೆ. ಹಾವುಗಳು ಅತಿ ಹೆಚ್ಚು ಉಷ್ಣತೆಯನ್ನಾಗಲಿ, ಅತಿ ಕಡಿಮೆ ಉಷ್ಣತೆಯನ್ನಾಗಲಿ ತಡೆದುಕೊಳ್ಳಲಾರವು.

ಹುತ್ತದೊಳಗೆ ತುಂಬಾ ತಂಪಾಗಿರುವುದರಿಂದ ಹಾವುಗಳಿಗೆ ತುಂಬಾ ಉಷ್ಣತೆಯೆನಿಸಿದಾಗ ಹುತ್ತದೊಳಗೆ ಅಥವಾ ಮಣ್ಣಿನೊಳಗೆ ಹೋಗುತ್ತವೆ. ಆದರೆ ಯಾವಾಗಲು ಹುತ್ತದೊಳಗೆ ಇರುವುದಿಲ್ಲ. ಹುತ್ತಗಳು ಗೆದ್ದಲು ಹುಳುಗಳ ಗೂಡು. ಹುತ್ತಕಾಲಿಯಿದ್ದಾಗ, ವಾತಾವರಣದಲ್ಲಿ ಅತಿ ಹೆಚ್ಚು ಉಷ್ಣತೆಯಿರುವಾಗ ಹಾವುಗಳು ಹುತ್ತದೊಳಗೆ ಹೋಗುವ ಸಾಧ್ಯತೆ ಇದೆ.

ಆದರೆ ನಾಗರಪಂಚಮಿ ಬರುವುದು ಆಗಸ್ಟ್ ತಿಂಗಳಲ್ಲಿ. ಆವಾಗ ಮಳೆಗಾಲ ಪ್ರಾರಂಭವಾಗಿರುತ್ತದೆ. ಆಗ ಹೆಚ್ಚು ಉಷ್ಣತೆಯಿರುವುದಿಲ್ಲ. ಹಾಗಾಗಿ ಹಾವುಗಳು ಹುತ್ತದಲ್ಲಿರುವುದು ಕಡಿಮೆ. ಹುತ್ತವೆಂದರೆ ಹಾವಿನ ಮನೆಯೆಂದೆ ಎಲ್ಲರ ನಂಬಿಕೆ. ಹೊಲಗದ್ದೆಗಳಲ್ಲಿ ಹುತ್ತ ಬೆಳೆದರೆ ಹಾವು ಬಂದು ವಾಸಮಾಡುತ್ತದೆ ಎಂಬ ಭಯ ಜನರದ್ದು. ಹೇಗಾದರು ಮಾಡಿ ಹುತ್ತವನ್ನು ಹಾವಿನ ವಾಸಕ್ಕೆ ಯೋಗ್ಯವಲ್ಲದ ಹಾಗೆ ಮಾಡಲು ಹಾಲು ಸುರಿಯುವ ಪದ್ಧತಿ ಹುಟ್ಟಿಕೊಂಡಿರಬಹುದು. ಹುತ್ತಕ್ಕೆ ಹಾಲು ಹಾಕುವುದರಿಂದ ಮಣ್ಣು ಮೆತ್ತಗೆ ಆಗುತ್ತದೆ. ಹಾಲಿನ ರುಚಿಗೆ ಇರುವೆಗಳು ಬರುತ್ತವೆ. ಇದರಿಂದಾಗಿ ಹೊಲಗದ್ದೆಗಳಲ್ಲಿ ಹಾವಿಗೆ ವಾಸಮಾಡಲು ಅವಕಾಶವಿರುವುದಿಲ್ಲ. ಹಾಗಾಗಿ ರೈತರು ನೆಮ್ಮದಿಯಿಂದ ಬೇಸಾಯ ಮಾಡಬಹುದು. ಈ ಕಾರಣಕ್ಕಾಗಿ ಹುತ್ತಕ್ಕೆ ಹಾಲೆರೆವರೋ ಏನೋ.

ಕೆಲವೊಂದು ಕಡೆಗಳಲ್ಲಿ ಜೀವಂತ ಹಾವುಗಳನ್ನು ಹಿಡಿದುಕೊಂಡು ಪೂಜೆಮಾಡುತ್ತಾರೆ. ಅದರಿಂದಲು ಹಾವುಗಳಿಗೆ ಸಂಕಟವಾಗುತ್ತದೆ. ಹಾವುಗಳಿಗೆ ಕಣ್ಣಿನ ರೆಪ್ಪೆ ಇರುವುದಿಲ್ಲ.

ಪೂಜೆಗೆ ಬಳಸುವ ಅರಿಶಿಣ, ಕುಂಕುಮವನ್ನ ಹಾವಿನ ಮೇಲೆ ಹಾಕುವುದರಿಂದ ಹಾವಿನ ಕಣ್ಣಿಗೆ ತೊಂದರೆಯಾಗಬಹುದು. ಮತ್ತು ಅದರಲ್ಲಿನ ರಾಸಾಯನಿಕಗಳಿಂದ ಕಣ್ಣುಗಳು ಕುರುಡಾಗಬಹುದು.

ಇಷ್ಟೇ ಅಲ್ಲದೆ ಪೂಜೆಯಲ್ಲಿ ಬಳಸುವ ಅಗರಬತ್ತಿಗಳು, ಧೂಪ ಮತ್ತು ಕರ್ಪೂರಗಳಿಂದ ಬರುವ ಹೊಗೆಯಿಂದ ಉಸಿರಾಟಕ್ಕೆ ತೊಂದರೆಯಾಗಬಹುದು. ಪೂಜೆಯ ಹೆಸರಿನಲ್ಲಿ ಹಾವುಗಳನ್ನು ಹಿಂಸಿಸದಿರಿ. ಹಾವುಗಳನ್ನು ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ.

ಹಾವುಗಳು ಮಾಂಸಾಹಾರಿ ಜೀವಿಗಳು. ಅವು ಕೇವಲ ಇಲಿ, ಕಪ್ಪೆ, ಹಕ್ಕಿ, ಮೊಟ್ಟೆ ಮುಂತಾದವುಗಳನ್ನು ತಿಂದು ಬದುಕುತ್ತವೆ. ಇದರಿಂದ ಪ್ರಕೃತಿಯ ಸಮತೋಲನ ಕಾಯುತ್ತದೆ. ಹಾವುಗಳು ಕಿವುಡು, ಅವುಗಳಿಗೆ ಸಂಗೀತ ಕೇಳುವುದಿಲ್ಲ ಬದಲಾಗಿ ಅವು ಹಾವಾಡಿಗನ ಪುಂಗಿಯ ಚಲನೆಯನ್ನು ನೋಡುತ್ತಾ ತನ್ನ ತಲೆದೂಗುತ್ತದೆ. ಹಾವುಗಳು ಭೂಮಿಯ ಮೇಲೆ ಬರುವ ಧ್ವನಿ ತರಂಗಗಳನ್ನು ಮಾತ್ರ ಗ್ರಹಿಸುತ್ತದೆ ಮತ್ತು ಅವುಗಳು ಮೂಗಿನಿಂದಲ್ಲಾ, ನಾಲಗೆಯಿಂದ ವಾಸನೆ ಗ್ರಹಿಸುತ್ತವೆ.

**“ಸರ್ಪಗಳನ್ನು ಸಂರಕ್ಷಿಸಿ"**

**ಪರೀಕ್ಷಿತ್**
**ಎಂಎಸ್ಸಿ ವಿದ್ಯಾರ್ಥಿ,**
**ವನ್ಯಜೀವಿ ಮತ್ತು ನಿರ್ವಹಣೆ ವಿಭಾಗ, ಕುವೆಂಪು ವಿಶ್ವವಿದ್ಯಾಲಯ**
**ಶಂಕರಘಟ್ಟ, ಶಿವಮೊಗ್ಗ**